ಧಡಗುಟ್ಟಿತ್ತು ಚಂಪನ ಎದೆ. ಈ ಮನೆಗೆ ಮತ್ತೊಬ್ಬರು ಬಂದು ಸೇರಿಕೊಳ್ಳುತ್ತಾರೆ. ಯಜಮಾಂತಿಗೆ ಪ್ರಿಯವಾಗಿಬಿಟ್ಟರೆ ಇಲ್ಲೇ ಬಿಡಾರ ಹೂಡಿದರೂ ಆಶ್ಚರ್ಯ ಇಲ್ಲ. ಎಷ್ಟೇ ಮನಸ್ಸು ಕೊಟ್ಟು ಕೆಲಸ ಮಾಡಲಿ, ತಾನು ಪರಕೀಯಳು. 'ಹೊರಡು...' ಅಂದರೆ ಗಂಟುಮೂಟೆ ಕಟ್ಟಿಕೊಂಡು, ಚಂಪಾ ಸಪ್ಪಗಾಗಿದ್ದರ ಅರಿವಿಲ್ಲದೆ ಸುಭದ್ರಮ್ಮ ಮತ್ತಷ್ಟು ಮಾತಾಡಿದ್ದರು,

"ಮುಟ್ಟು ಗಿಟ್ಟು ಅಂತ ರಗಳೆ ಕಳ್ಕಂಡೋರು ಸಿಕ್ತಾರಾ ಅಂತ ಹುಡುಕ್ಬೇಕು. ಎಳೆಮಕ್ಕಳಿಗೆ ಬೇಗ ಮುಟ್ಟುಚಟ್ಟು ಆಗ್ಬಿಡುತ್ತೆ..." ಉಗುಳು ನುಂಗಿಕೊಂಡಿದ್ದಳು ಚಂಪಾ.

★★★

ಆ ಸಲ ಅಣ್ಣ ಹಾಜರಿ ಹಾಕಿದಾಗ ಅವನ ಜೊತೆ ಒಂದೆರಡು ವಾರ ತೌರಿಗೆ ಹೋಗಿ ಬರುವ ಬೇಡಿಕೆಯನ್ನು ಯಜಮಾಂತಿಯ ಮುಂದಿಟ್ಟಳು ಚಂಪಾ. ಸುಭದ್ರಮ್ಮನಿಗೆ ಕೈಕಾಲು ಬಿದ್ದು ಹೋದ ಅನುಭವ.

"ಇನ್ನೊಂದು ತಿಂಗಳು ಅಂದ್ರೆ ಮಾಲಿನಿ ಬಂದ್ಬಿಡ್ತಾಳೆ. ಕೆಲಸ ಜಾಸ್ತಿಯಾಗುತ್ತೇಂತ ಎಲ್ಲಾದ್ರೂ ಚಕ್ರ ಹಾಕೋ ಯೋಚ್ನೆ ಮಾಡಿದೀಯನೇ?" ಕೇಳೇಬಿಟ್ಟರು ಸುಭದ್ರಮ್ಮ. "ಛೇ... ಛೇ..." ಅಂದಳು ಮಿತಭಾಷಿ. ಆದರೂ ಅನುಮಾನ ಸುಭದ್ರಮ್ಮನಿಗೆ. ತನ್ನ ಪಾಲಿಗೆ ಸಂದಾಯವಾಗಬೇಕಾದ ಗುಪ್ತಧನಕ್ಕೆ ಅವಳು ಬೇಡಿಕೆ ಇಟ್ಟಿದ್ದು ಅವರ ಅನುಮಾನವನ್ನು ಇಮ್ಮಡಿಸಿತ್ತು. ಒಲ್ಲದ ಮನಸ್ಸಿನಿಂದಲೇ ಅವಳದಾಗಿದ್ದ ದುಡ್ಡನ್ನು ಅವಳ ಕೈಗೆ ತಲುಪಿಸಿದ್ದರು ಸುಭದ್ರಮ್ಮ. ಹೊರಡುವ ಹೊತ್ತಿನಲ್ಲಿ ಚಂಪಾ ಅವರ ಕಾಲು ಮುಟ್ಟಿ ನಮಸ್ಕರಿಸಿ, 'ಓ, ಋಣ ಕಡಿದುಹೋಯ್ತು...' ಮತ್ತಷ್ಟು ಕಂಗಾಲಾಗಿದ್ದರು ಸುಭದ್ರಮ್ಮ.

ಚಂಪನ ಅಣ್ಣನಿಗೆ ಅವಳು ತನ್ನ ಜೊತೆ ಹೊರಟು ನಿಂತಿದ್ದು ಹಿತವೇನಾಗಿರಲಿಲ್ಲ. ಆದರೆ ಜೊತೆಗೆ ಬರುತ್ತೇನೆಂದು ಗಂಟು ಬಿದ್ದವಳನ್ನು ನಿವಾರಿಸಿಕೊಳ್ಳಲು ಸಾಧ್ಯವೇ? ಅಣ್ಣ, ತಂಗಿ ಅಂಗಳ ದಾಟುತ್ತಿದ್ದಂತೆ ಕುಸಿದು ಕೂತಿದ್ದರು ಸುಭದ್ರಮ್ಮ.

"ಯಾರನ್ನೂ ಜಾಸ್ತಿ ನಂಬ್ಕಂಬರ್ದು ಕಣ್ರೇ. ಐನ್ ಹೊತ್ತಿಗೆ ಕೈಕೊಟ್ಟುಬಿಡ್ತಾರೆ..." ಹೆಂಡತಿ ಹಲುಬುತ್ತಿದ್ದರೆ ಯಜಮಾನರಿಗೂ ಚಿಂತೆ ಹತ್ತಿಕೊಂಡಿತ್ತು.

★★★

ದೊಡ್ಡಮನೆಯವರ ಚಿಂತೆಗೆ ಅರ್ಥವೇ ಇಲ್ಲವೆಂಬಂತೆ ಹೇಳಿದ ಸಮಯಕ್ಕೆ ಸರಿಯಾಗಿ ವಾಪಸಾಗಿದ್ದಳು ಚಂಪಾ. ಈ ಸಲ ಅಣ್ಣ ಜೊತೆಗಿಲ್ಲ, ಒಬ್ಬಳೇ.

"ಬಂದ್ಯನೇ ಪುಣ್ಯಾತ್ಗಿತ್ತಿ, ನಂಗೆ ಜೀವ ಬಂದ್ಹಂಗಾಯ್ತು..." ಅಂದಿದ್ದರು ಸುಭದ್ರಮ್ಮ. ಸೆರಗು ಸೊಂಟಕ್ಕೆ ಸಿಕ್ಕಿಸಿಕೊಂಡು ಮುದುಕಮ್ಮನ ಸೇವೆಗೆ ಅಣಿಯಾಗಿದ್ದಳು ಚಂಪಾ.

"ನೀನು ಎಲ್ಲಿ? ಎಲ್ಲಿ? ಅಂತ ಹೆಬ್ಬೆರಳು ಮೇಲೆ, ಕೆಳಗೆ ಆಡಿಸಿ ಸೈಗೆ ಮಾಡಿದ್ದೇ ಮಾಡಿದ್ದು. ಇವತ್ತು ನಮ್ಮತ್ತೆಗೆ ಲಾಯ್ಕು ನಿದ್ದೆ ಬರುತ್ತೆ..."

'ನಂಗೂ...' ಮನಸ್ಸಿನಲ್ಲೇ ಅಂದುಕೊಂಡಿದ್ದಳು ಚಂಪಾ.

ಮತ್ತೆರಡು ದಿನ ಕಳೆಯುವುದರಲ್ಲಿ ಚಂಪಾ ತಾನು ಅಣ್ಣನ ಬೆನ್ನು ಹತ್ತಿ ಹೋಗಿದ್ದರ ಕಾರಣವನ್ನು ಸುಭದ್ರಮ್ಮನ ಹತ್ತಿರ ಪಿಸುಮಾತಲ್ಲಿ ಹಂಚಿಕೊಂಡಿದ್ದಳು. ಅವಳು ಹೇಳಿದ್ದನ್ನು ಕೇಳಿ ಸುಭದ್ರಮ್ಮ ತಲ್ಲಣಿಸಿಬಿಟ್ಟರು. ಹೊಟ್ಟೆಪಾಡು ಹೀಗೂ ಮಾಡಿಸುತ್ತದೆಯಾ? ಎಂದೂ ಇಲ್ಲದೆ ಅವತ್ತು ಚಂಪನ ತಲೆ ನೇವರಿಸಿ ಸುಭದ್ರಮ್ಮ ಕಣ್ಣೊರೆಸಿಕೊಂಡಿದ್ದರು,

"ಇನ್ನೊಂದು ತಿಂಗಳು ಬಗ್ಗಿ, ಎದ್ದು ಕೆಲಸ ಮಾಡೋಕೆ ಹೋಗ್ಬೇಡ. ನಿನ್ನ ಜೀವಾನೂ ನೋಡ್ಕೊ..." ಎಂದು ತಾಕೀತು ಮಾಡಿದ್ದರು. ಅವತ್ತಿನಿಂದ ದಿನಾ ರಾತ್ರಿ ಮಲಗುವ ಹೊತ್ತಿಗೆ ಅವಳಿಗೆ ಒಂದು